# ಪ್ರಹಸನ ಪ್ರಸಂಗ

**C**ommon Sense ಎಂಬ ಪದಕ್ಕೆ ಸಾಮಾನ್ಯಜ್ಞಾನ ಎನ್ನೋಣವೆ? ಆಧುನಿಕ ಕಾಲದ ನಮಗೆ ಅದು ಹೆಚ್ಚಾಗಿದೆ ಎಂದು, ಹಾಗೂ ಹಳೆ ತಲೆಮಾರಿನ ಜನರಿಗೆ ಅದು ಅಷ್ಟಾಗಿ ಇರಲಿಲ್ಲವೆಂದು ಬೀಗುತ್ತೇವೆ. ಆದರೆ ಸುಮಾರು ೧೩೫ ವರ್ಷಗಳಷ್ಟು ಹಿಂದೆ ನಡೆದ ಈ ಘಟನೆಯ ಬಗ್ಗೆ ಕೇಳಿ!

ಜಯರಾಂಬಾಟಿ ಹಳ್ಳಿಯಲ್ಲಿರುವಾಗ ಒಮ್ಮೆ ಶ್ರೀಮಾತೆಯವರಿಗೆ ಆಮಶಂಕೆಯ ರೋಗ ತಗುಲಿ, ಮಾತೆಯವರು ಬಳಲಿ ಬೆಂಡಾದರು. ದೇಹವೆಲ್ಲಾ ಬಾತುಕೊಂಡು ಕಿವಿ, ಮೂಗುಗಳಿಂದ ನೊರೆ ಸೋರತೊಡಗಿತು. ಕಣ್ಣುಗಳೂ ಕಣ್ಣೀರು ಸುರಿಸಿ ಸುರಿಸಿ ಮಂಜಾದವು. ಯಾವ ಚಿಕಿತ್ಸೆಗೂ ರೋಗ ಬಗ್ಗದಿರಲು, ಕಡೆಯ ಪ್ರಯತ್ನವೆಂದು ಶ್ರೀಮಾತೆಯವರು ಅಲ್ಲಿನ ಸಿಂಹವಾಹಿನಿ ದೇವಸ್ಥಾನಕ್ಕೆ ಹೋಗಿ ದೇವಿಯ ವಿಗ್ರಹದ ಮುಂದೆ ಮಲಗಿ 'ಉಪವಾಸ' ವ್ರತ ಕೈಗೊಂಡರು! ದೇವಿ ಕನಸಿನಲ್ಲಿ ಕಾಣಿಸಿಕೊಂಡು "ಕುಂಬಳಕಾಯಿ ಬಳ್ಳಿಯ ಎಲೆಯನ್ನು ಉಪ್ಪಿನೊಂದಿಗೆ ಅರೆದು ಅದರ ರಸವನ್ನು ಕಣ್ಣಿಗೆ ಹಚ್ಚು; ವಾಸಿಯಾಗುವುದು" ಎಂದಳು. ಶ್ರೀಮಾತೆಯವರು ಅದರಂತೆ ಮಾಡಿದರು. ಇದಕ್ಕೂ ಸ್ವಲ್ಪ ಮುಂಚೆ ಶ್ರೀಮಾತೆಯವರ ತಾಯಿ ಶ್ಯಾಮಸುಂದರಿದೇವಿಯವರಿಗೆ ೧೨ ಅಥವಾ ೧೩ ವಯಸ್ಸಿನ ಕಮ್ಮಾರ ಹುಡುಗಿಯ ರೂಪದಲ್ಲಿ ದೇವಿ ಕಾಣಿಸಿಕೊಂಡು "ಅವಳನ್ನು (ಶ್ರೀಮಾತೆಯವರನ್ನು) ಅಲ್ಲಿಂದ ಬೇಗ ಕರೆದುಕೊಂಡು ಬಾ; ಈ ಔಷಧಿಯನ್ನು ಕೊಡು, ವಾಸಿಯಾಗುವಳು' ಎಂದು ಹೇಳಿದಳು. ಈ ಎಲ್ಲಾ ಚಿಕಿತ್ಸೆಯಿಂದ ಶ್ರೀಮಾತೆ ಯವರು ಸಂಪೂರ್ಣ ಗುಣಮುಖರಾದರು. ನಂತರ ಯಾರಾದರೂ ಕೇಳಿದರೆ, "ತಾಯಿ (ಸಿಂಹವಾಹಿನಿ) ಔಷಧ ಸೂಚಿಸಿ ಕಾಪಾಡಿದಳು" ಎಂದು ಅಭಿಮಾನದಿಂದ ಹೇಳುತ್ತಿದ್ದರು. ದೇವಿಯ ಖ್ಯಾತಿ ಈಗ ಸುತ್ತಮುತ್ತಲೂ ಹರಡಿತು.

ಹೀಗೆಂದು ಎಲ್ಲರೂ ದೇವಿಯ ಕೃಪೆ ಪಡೆಯಬಲ್ಲರೆ? ಒಮ್ಮೆ ಶ್ರೀಮಾತೆಯವರ ಚಿಕ್ಕಪ್ಪ, ಅವಿವಾಹಿತ ನೀಲಮಾಧವರು, ಇದೇ ತರಹದ ವಿಷಯದಲ್ಲಿಯೇ ದೇವಿಯ ಕೃಪೆಗಾಗಿ, ಅವಳ ಮುಂದೆ ನಿರಶನವ್ರತ ಕೈಗೊಂಡು ಯಥಾಪ್ರಕಾರ ಮಲಗಿದರು! ಆದರೆ ದೊಡ್ಡದಾದ ಕಪ್ಪು ಗೊದ್ದಗಳು ಸಾಲು ಸಾಲಾಗಿ ಬಂದು ಅವರನ್ನು ಕಚ್ಚಿ ಅಲ್ಲಿಂದ ಓಡಿಸಿದವು! ದೇವಿಯು ಈ ಸಾರಿ ಶ್ಯಾಮಸುಂದರಿದೇವಿಯವರಿಗೆ ಸ್ವಪ್ನದಲ್ಲಿ ಕಾಣಿಸಿಕೊಂಡು ಹೇಳಿದಳು: "ನಾನೀಗ ನಿದ್ರೆಯಲ್ಲಿದ್ದೇನೆ. (ಹಿಂದೂ ದೇವದೇವಿಯರು ಆರು ತಿಂಗಳ ಕಾಲ, ಅಂದರೆ ಉತ್ತರಾಯಣ ಸಂಕ್ರಮಣದಿಂದ ದಕ್ಷಿಣಾಯನ ಸಂಕ್ರಮಣದವರೆಗೆ, ದೀರ್ಘ ನಿದ್ರೆಯಲ್ಲಿರುತ್ತಾರೆಂದು ಶಾಸ್ತ್ರದಲ್ಲಿದೆ.) ಅವನೇಕೆ (ನೀಲಮಾಧವ) ಈಗ ನಿರಶನ ವ್ರತ ಕೈಗೊಂಡಿದ್ದಾನೆ? ಅವನೊಬ್ಬ ಬ್ರಾಹ್ಮಣ; ಅವನಿಗಷ್ಟೂ ತಿಳಿಯದೆ? ಬೇಗ ಹೋಗು! ಅವನನ್ನೆಬ್ಬಿಸಿ ಕರೆದುಕೊಂಡು, ಬಾ! "

ಆಗ ಸರಳತೆಯ ಸಾಕಾರಮೂರ್ತಿಯಾದ ಶ್ಯಾಮಸುಂದರಿ ದೇವಿ, ದೇವಿಗೆದುರು ಪ್ರಶ್ನೆ ಹಾಕಿದರು : "ತಾಯಿ, ನೀನು ಇಷ್ಟನ್ನೆಲ್ಲಾ ಹೇಳಿದೆ; ಔಷಧವನ್ನು ಹೇಳಬಾರದಾಗಿತ್ತೆ?"

ಸಂಗ್ರಹ : —ಎಸ್. ಗೋಪಿನಾಥ

ಒಮ್ಮೆ ಶ್ರೀಮಾತೆಯವರಿಗೆ ತುಂಬ ಹಲ್ಲುನೋವು ಶುರುವಾಯಿತು. ಹಲ್ಲು ಕೀಳುವುದಕ್ಕೆ ಸ್ವಾಮಿ ಶಾರದಾನಂದರು ದಂತವೈದ್ಯನನ್ನು ಆಹ್ವಾನಿಸಿದರು. ಆದರೆ ದಂತವೈದ್ಯ ಬಂದಾಗ ಶ್ರೀಮಾತೆಯವರು ಪತ್ತೆಯೆ ಇಲ್ಲ. ಎಲ್ಲೆಲ್ಲಿ ಹುಡುಕಿದರೂ ಅವರ ಸುಳಿವು ಕಾಣಿಸಲಿಲ್ಲ. ಗೋಲಾಪ್-ಮಾ ಹೇಳಿದಳು, "ಇದು ಹೀಗಾಗುವುದೆಂದು ಶರತ್‌ಗೆ ಮೊದಲೆ ತಿಳಿದಿರಬೇಕಿತ್ತು. ಔಷಧಿಯ ಮೂಲಕ ಹಲ್ಲುನೋವು ಗುಣವಾಗದೆ? ಶ್ರೀಮಾತೆಯವರು ನಮ್ಮಂತಲ್ಲ. ಕೀಳುವುದು ಕತ್ತರಿಸುವುದು ಎಂದರೆ ಅವರಿಗೆ ಭಯ."

ಸ್ವಾಮಿ ಶಾರದಾನಂದರು ಹೇಳಿದರು: "ಅಭಯಳೆ ಭಯಪಟ್ಟರೆ ಶರತ್‌ನ ದೋಷವೇನು? ಔಷಧದಿಂದ ಗುಣವಾಗುವುದಿಲ್ಲ. ಕೇವಲ ಸಮಯ ನಷ್ಟ, ಮತ್ತು ಕಷ್ಟ." "ಶ್ರೀಮಾತೆಯವರಿಗೆ ಇಷ್ಟವಿಲ್ಲದುದನ್ನು ನಾವು ಮಾಡುವುದೇ ಇಲ್ಲ" ಎಂದು ಗೋಲಾಪ್-ಮಾ ಖಡಾಖಂಡಿತವಾಗಿ ನುಡಿದಳು. ಬೇರೆ ಉಪಾಯವಿಲ್ಲದೆ ಡಾಕ್ಟರನ್ನು ಹಿಂದಕ್ಕೆ ಕಳಿಸಲಾಯಿತು. ಡಾಕ್ಟರ್ ಹೊರಟುಹೋದಮೇಲೆ ಶ್ರೀಮಾತೆಯವರು ಮಂಚದ ಕೆಳಗಿನಿಂದ ಮೆಲ್ಲಗೆ ಹೊರಬಂದರು! ಆಶ್ಚರ್ಯದ ಸಂಗತಿ ಎಂದರೆ ಇದಾದಮೇಲೆ ಅವರ ಹಲ್ಲುನೋವು ಕ್ರಮೇಣ ಕಡಮೆಯಾಯಿತು.

❖ ❖ ❖

ಶ್ರೀಮಾತೆಯವರು ವಿನೋದಪ್ರಿಯರು. ಒಂದು ದಿನ ನಿವೇದಿತಾ ಮತ್ತು ಕ್ರಿಸ್ಟೈನ್ ಬಂದಿದ್ದರು. ನಿವೇದಿತಾ ತನಗೆ ಬರುತ್ತಿದ್ದ ಅಲ್ಪಸ್ವಲ್ಪ ಬಂಗಾಳಿಯಲ್ಲಿ "ಮಾತಾದೇವಿ, ನೀವು ನಮಗೆಲ್ಲ ಕಾಳಿ" ಎಂದಳು. ಕ್ರಿಸ್ಟೈನ್ ಕೂಡ ಇಂಗ್ಲಿಷ್‌ನಲ್ಲಿ ಅದನ್ನೇ ಸಮರ್ಥಿಸಿದಳು.

ಅದನ್ನು ಕೇಳಿ ಶ್ರೀಮಾತೆಯವರು ನಗುತ್ತ,"ಇಲ್ಲಮ್ಮ, ನಾನು ಕಾಳಿ-ಗೀಳಿ ಆಗಲಾರೆ. ಹಾಗಾದರೆ ನಾಲಿಗೆಯನ್ನು ಯಾವಾಗಲೂ ಚಾಚಿಕೊಂಡೇ ಇರಬೇಕಾಗುತ್ತದೆ" ಎಂದರು. ನಿವೇದಿತಾ ಹೇಳಿದಳು,"ಶ್ರೀಮಾತೆಯವರು ಅಷ್ಟೊಂದು ಕಷ್ಟ ಪಡಬೇಕಿಲ್ಲ. ನಾವೇ ಅವರನ್ನು ಜನನೀ ರೂಪದಲ್ಲಿ ನೋಡುತ್ತೇವೆ. ಶ್ರೀರಾಮಕೃಷ್ಣರು ನಮ್ಮ ಶಿವ." ಶ್ರೀಮಾತೆಯವರು ನಕ್ಕು ನುಡಿದರು: "ಹಾಗಾದರೆ ಪರವಾಗಿಲ್ಲ."